3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.271/2024**

ಪ್ರಾಸಾ 5

ಚಾಸಾ 19

| | |
|---|---|
| ಹೆಸರು | ಶ್ರೀನಿವಾಸ್ |
| ತಂದೆಯ ಹೆಸರು | ಗೋವಿಂದಯ್ಯ |
| ವಯಸ್ಸು | 30 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಕುಳ್ಳಿನಂಜಯ್ಯನಪಾಳ್ಯ |

ಸಾಕ್ಷಿಯನ್ನು ದಿನಾಂಕ 19.04.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನರಸೇಗೌಡ ಮತ್ತು ಸೋಮಶೇಖರರವರು ಗೊತ್ತು. ಹೇಮಲತಾರವರು ಗೊತ್ತು. ಈಗ ನನಗೆ ತೋರಿಸಿದ ನಿಪಿ.1 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ದಿನಾಂಕ 10.02.2024 ರಂದು ನಮ್ಮ ಊರಿಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಅಂದರೆ ನರಸೇಗೌಡ ಬಿನ್ ಕಪ್ಪಯ್ಯರವರ ಜಮೀನಿನಲ್ಲಿ ಮರಿಯಪ್ಪರವರ ಶವ ಬಿದ್ದಿತ್ತು. ನಾನು ಕುಣಿಗಲ್ ನಿಂದ ಊರಿಗೆ ಹೋಗುತ್ತಿದ್ದಾಗ ಸದರಿಯವರ ಜಮೀನಿನ ಹತ್ತಿರ ಜನ ಸೇರಿದ್ದರು, ಪೊಲೀಸರೂ ಸಹ ಬಂದಿದ್ದರು. ಆದ್ದರಿಂದ, ನಾನು ಅಲ್ಲಿಗೆ ಹೋದಾಗ ಪೊಲೀಸರು ಮೃತ ದೇಹವನ್ನು ಪರಿಶೀಲನೆ ಮಾಡುತ್ತಿದ್ದರು. ಆಗ ನನ್ನೊಂದಿಗೆ ನರಸೇಗೌಡ ಮತ್ತು ಸೋಮಶೇಖರರವರು ಇದ್ದರು. ಸ್ಥಳದಲ್ಲಿ ಹೇಮಲತಾರವರು ಅಳುತ್ತಿದ್ದರು. ಹೇಮಲತಾರವರು ಪೊಲೀಸರಿಗೆ ನನ್ನ

ತಂದೆಯನ್ನು ಯಾರೋ ಬಂದು ಕೊಲೆ ಮಾಡಿರುತ್ತಾರೆಂದು ಹೇಳಿಕೊಂಡು ಅಳುತ್ತಿದ್ದರು.

2) ಮೃತ ದೇಹದ ಪಕ್ಕದಲ್ಲಿ ನೀಲಿ ಬಣ್ಣ ಕರ್ಚೀಫ್ ಇತ್ತು. ಅದರ ಕೆಳಗೆ ತುಂಡಾಗಿರುವ ಹಸ್ತ ಇರುತ್ತದೆ ಎಂದು ಪೊಲೀಸರು ಹೇಳಿರುತ್ತಾರೆ. ಸ್ದಳದಲ್ಲಿ ಪೊಲೀಸರು ಹತ್ತಿಯಿಂದ ರಕ್ತವನ್ನು ಶೇಖರಿಸುತ್ತಿದ್ದರು. ಸ್ದಳದಲ್ಲಿ ರಕ್ತವಾಗಿರುವ ಮಣ್ಣು ಮತ್ತು ರಕ್ತವಿಲ್ಲದ ಮಣ್ಣನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಮರಿಯಪ್ಪರವರ ದ್ವಿಚಕ್ರ ವಾಹನ ರಸ್ತೆಯ ಮೇಲೆ ಬಿದ್ದಿತ್ತು. ಅದರ ಪಕ್ಕದಲ್ಲಿ ಒಂದು ಜೊತೆ ಚಪ್ಪಲಿ ಬಿದ್ದಿತ್ತು. ಅವುಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಚಪ್ಪಲಿಗಳಿರುವ ಬಿಳಿ ಬಣ್ಣದ ಬ್ಯಾಗ್ , ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತವಲ್ಲದ ಮಣ್ಣು ಇರುವ ಎರಡು ಖಾಕಿ ಎನ್ವಲಪ್ ಕವರ್ ಗಳನ್ನು ಹಾಜರುಪಡಿಸಿದ್ದು ಅವುಗಳ ಸೀಲನ್ನು ತೆರೆಯಲು ಅನುಮತಿ ನೀಡಲಾಯಿತು. ಸಾಕ್ಷಿಯು ಚಪ್ಪಲಿ, ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತವಲ್ಲದ ಮಣ್ಣನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ.4 ರಿಂದ 6 ಎಂದು ಗುರುತಿಸಲಾಯಿತು. ನ್ಯಾಯಾಲಯದ ಆವರಣದಲ್ಲಿ ನಿಲ್ಲಿಸಿರುವ ದ್ವಿಚಕ್ರ ವಾಹನ ಸಂಖ್ಯೆ ಕೆಎ.52.ಇ.4284 ನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಅದನ್ನು ಮು.ಮಾ.7 ಎಂದು ಗುರುತಿಸಲಾಯಿತು. ಸ್ದಳದಲ್ಲಿ ಪೊಲೀಸರು ಭಾವಚಿತ್ರಗಳನ್ನು ತೆಗೆದುಕೊಂಡು ವೀಡಿಯೋ ಮಾಡಿಕೊಂಡಿರುತ್ತಾರೆ. ನಂತರ ಮಹಜರನ್ನು ಮಾಡಿಕೊಂಡು ನಿಪಿ.1 ರಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

3) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ಶವ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅದೇ ದಿನ ಬೆಳಿಗ್ಗೆ 9.30 ರಿಂದ 12.30 ಗಂಟೆ ಸಮಯದಲ್ಲಿ ಪಡೆದುಕೊಂಡಿರುತ್ತಾರೆ. ಆಗ ನರಸೇಗೌಡ ಮತ್ತು ಸೋಮಶೇಖರರವರೂ ಸಹ ಇದ್ದರು. ಪೊಲೀಸರು ಮೃತ

ದೇಹವನ್ನು ಪರಿಶೀಲಿಸಿದ್ದು , ಮೃತ ಮರಿಯಪ್ಪರವರ ಮುಖ, ಕೈಯೆಲ್ಲಾ ರಕ್ತ ಆಗಿತ್ತು. ಅವರಿಗೆ ಮಚ್ಚಿನಿಂದ ಹೊಡೆದ ರೀತಿ ಕಾಣುತ್ತಿತ್ತು. ಮೃತ ದೇಹವನ್ನು ಮೊದಲು ಕಿಶೋರರವರು ನೋಡಿರುತ್ತಾರೆಂದು ಪೊಲೀಸರು ಬರೆದುಕೊಂಡಿರುತ್ತಾರೆ. ಮರಿಯಪ್ಪರವರು ಜೀವಂತವಿದ್ದಾಗ ಕೊನೆಯದಾಗಿ ಅವರ ಹೆಂಡತಿ ನೋಡಿರುತ್ತಾರೆಂದು ಬರೆದುಕೊಂಡಿರುತ್ತಾರೆ. ನರಸೇಗೌಡ ಮತ್ತು ಸೋಮಶೇಖರರವರ ಸಹಿಗಳನ್ನೂ ಸಹ ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಭಾವಚಿತ್ರಗಳನ್ನು ತೆಗದುಕೊಂಡಿರುತ್ತಾರೆ ಮತ್ತು ವೀಡಿಯೋವನ್ನೂ ಸಹ ಮಾಡಿರುತ್ತಾರೆ. ಈಗ ನನಗೆ ತೋರಿಸಿದ ಭಾವಚಿತ್ರಗಳನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಪಿ.3 ರಿಂದ 7 ಎಂದು ಗುರುತಿಸಲಾಗಿದೆ. ನಿಪಿ.7 ರಲ್ಲಿ ನಾನು ಕಾಣುತ್ತೇನೆ. ಮೃತ ದೇಹದ ಮೇಲೆ ಜರ್ಕಿನ್ , ಷರಟು ಮತ್ತು ಪ್ಯಾಂಟ್ ಇದ್ದು ಒಂದು ಟವಲ್ ಮೃತ ದೇಹದ ಪಕ್ಕ ಬಿದ್ದಿತ್ತು.

4) ನನ್ನನ್ನು ಕುಣಿಗಲ್ ಪೋ.ಠಾಣೆಗೆ ಕರೆಸಿ ಮಹಜರ್ ಗೆ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ನಿಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಪೋ.ಠಾಣೆಯಲ್ಲಿ ಆರೋಪಿತರ ಭಾವಚಿತ್ರಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 1 ರಿಂದ 3 ನೇ ಆರೂಪಿಗಳ ಭಾವಚಿತ್ರಗಳನ್ನು ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.12 ರಿಂದ 14 ಎಂದು ಗುರುತಿಸಲಾಯಿತು. ನನ್ನೊಂದಿಗೆ ದೊಡ್ಡಚೆನ್ನಯ್ಯ ರವರು ಹಾಜರಿದ್ದರು.

5) 1 ನೇ ಆರೋಪಿಯನ್ನು ಈ ಹಿಂದೆ ನಮ್ಮ ಊರಿನಲ್ಲಿ ನೋಡಿರುತ್ತೇನೆ. ಪೊಲೀಸರು ಆರೋಪಿತರ ಭಾವಚಿತ್ರಗಳನ್ನು ವಶಕ್ಕೆ ತೆಗೆದುಕೊಂಡಾಗ ಹೇಮಲತಾರವರು 1 ನೇ ಆರೋಪಿಯನ್ನು ಪ್ರೀತಿಸುತ್ತಿದ್ದು ಹೇಮಲಾತಾರವರ ತಂದೆ ಒಪ್ಪದ ಕಾರಣ ಈ ರೀತಿ

ಕೃತ್ಯವನ್ನು ಎಸಗಿರುತ್ತಾರೆಂದು ನನಗೆ ಠಾಣೆಯಲ್ಲಿ ಗೊತ್ತಾಗಿರುತ್ತದೆ. ಈ ಸಂಬಂಧ ಹೇಳಿಕೆಯನ್ನು ನೀಡಿರುತ್ತೇನೆ.

(ಆರೋಪಿಗಳ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತುಸಿ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ